ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ

ವಾದಿ ನನಗೆ ಸುಮಾರು 15-20 ವರ್ಷಗಳಿಂದ ಪರಿಚಯ ಇರುತ್ತಾರೆ. ವಾದಿರವರು ಯಾವುದೇ ಜಮೀನನ್ನು ಖರೀದಿಸುವ ಮತ್ತು ಇತರೆ ಪತ್ರ ವ್ಯವಹಾರವವನ್ನು ನನ್ನ ಬಳಿಯೇ ಮಾಡಿಸಿರುತ್ತಾರೆ ಎಂದರೆ ಪ್ರಸ್ತುತ ಕರಾರು ಪತ್ರವನ್ನು ಹೊರತುಪಡಿಸಿ ನನ್ನ ಬಳಿ ಯಾವುದೇ ಪತ್ರ ವ್ಯವಹಾರ ಮಾಡಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿ-1 ನ್ನು ತಯಾರಿಸುವ ಪೂರ್ವದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದದಿ ಖಾತೆ, ಕಂದಾಯ, ಇಸಿ ಮತ್ತು ಮೂಲ ಪತ್ರವನ್ನು ಪರಿಶೀಲಿಸಿರುತ್ತೇನೆ. ವಾದಿರವರು ನಿಪಿ-1 ನ್ನು ತಯಾರಿಸು ಮಾಹಿತಿ ನೀಡುವ ಸಮಯದಲ್ಲಿ ಅವರ ಜೊತೆಯಲ್ಲಿ ಮಂಜೂನಾಥ, ಚಿಕ್ಕರಾಮೇಗೌಡ, ವಾದಿ ಮತ್ತು 1 ನೇ ಪ್ರತಿವಾದಿ ಇದ್ದರು. ಇವರುಗಳನ್ನು ಹೊರತುಪಡಿಸಿ ಬೇರೆ ಯಾರೂ ಸಹ ಇರಲಿಲ್ಲ.

ಸಾಕ್ಷಿಗೆ ವಾದಿರವರು 35 ಲಕ್ಷ ಹಣವನ್ನು 1 ನೇ ಪ್ರತಿವಾದಿಗೆ ಕೊಟ್ಟಿರುವುದನ್ನು ನೀವು ನೋಡಿರುತ್ತೀರಾ ಎಂದರೆ ಸಾಕ್ಷಿ ವಾದಿರವರು ಚೆಕ್ ಮೂಲಕ ಹಣವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಚೆಕ್ ಅನ್ನು ವಾದಿರವರು ನನ್ನ ಕಛೇರಿಯಲ್ಲೇ 1 ನೇ ಪ್ರತಿವಾದಿಗೆ ನೀಡಿರುತ್ತಾರೆ. ನಿಪಿ-1 ರ ದಾಖಲೆಯನ್ನು ನಾನು, ವಾದಿ, ಚಿಕ್ಕರಾಮೇಗೌಡ ರವರು ಸೇರಿ 1 ನೇ ಪ್ರತಿವಾದಿಗೆ ತಿಳಿಯದಂತೆ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಪತ್ರ ಬರಹಗಾರನಾಗಿ

1 ನೇ ಪ್ರತಿವಾದಿಗೆ ನಿಪಿ-1 ರ ದಾಖಲೆಯಲ್ಲಿ ಇರುವ ವಿಷಯವನ್ನು ಓದಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.